# ಭಿನ್ನವಾಗಿ ಬಿಂಬಿಸಿಕೊಳ್ಳುವ ಅಭಿಲಾಷೆ



ರಂಗಭೂಮಿ, ಕಿರುತೆರೆ, ಬೆಳ್ಳಿತೆರೆಯಲ್ಲಿಯೂ ಸಕ್ರಿಯವಾಗಿರುವ ನಟಿ ಮಹಾಲಕ್ಷ್ಮಿ ಅವರಿಗೆ ತಮ್ಮನ್ನು ಹೊಸ ಧಾಟಿಯಲ್ಲಿ ಬಿಂಬಿಸಿಕೊಳ್ಳಬೇಕೆಂಬ ಅಪೇಕ್ಷೆ.

■ **ಸುಮಲತಾ ಎನ್**

◆ **ನಟನೆಯೆಡೆಗೆ ಮನಸ್ಸು ಹೊರಳಿದ್ದು ಹೇಗೆ?**

ನಾನು ಆರನೇ ತರಗತಿ ಓದುವವರೆಗೂ ನಮ್ಮ ಕುಟುಂಬ ಚಿಕ್ಕಬಳ್ಳಾಪುರದಲ್ಲಿತ್ತು. ಆಮೇಲೆ ಬೆಂಗಳೂರಿನತ್ತ ಬಂದೆವು. ನನ್ನ ತಾಯಿ ಲೆಕ್ಚರರ್ ಆಗಿದ್ದರು. ಅವರೇ ನಾನು ಹಾಗೂ ನನ್ನ ಅಣ್ಣ ಧನಂಜಯ್‌ನನ್ನು ಪರಿಚಯಸ್ಥರ ಮೂಲಕ ನಾಟಕ ತರಬೇತಿಗೆ ಸೇರಿಸಿದರು. ರಂಗತಂಡವೊಂದಕ್ಕೆ ಸೇರಿ ಹಲವು ನಾಟಕಗಳಲ್ಲಿ ಅಭಿನಯಿಸಿದೆವು. ಅಚಾನಕ್ಕಾಗಿ ಅಮ್ಮನಿಗೂ ಧಾರಾವಾಹಿಯಲ್ಲಿ ನಟಿಸಲು ಅವಕಾಶ ಸಿಕ್ಕಿತು. ನಮ್ಮ ಕರಿಯರ್ ಇಲ್ಲೇ ಶುರುವಾಯಿತು. ನಮ್ಮ ಕುಟುಂಬದಲ್ಲಿ ಯಾರಿಗೂ ಸಿನಿಮಾರಂಗದ ಬಗ್ಗೆ ತಿಳಿದಿರಲಿಲ್ಲ. ಆದರೆ ಅಮ್ಮನ ಆಸಕ್ತಿ, ಕಾಳಜಿ, ಪ್ರೀತಿಯಿಂದ ನಾವು ಇಲ್ಲಿಗೆ ಬಂದೆವು. ಅಣ್ಣನನ್ನು, ನನ್ನನ್ನು ಈ ರಂಗಕ್ಕೆ ಬರುವಂತೆ ಪ್ರೇರೇಪಿಸಿದರು. ಚಿಕ್ಕ ವಯಸ್ಸಿನಲ್ಲಿಯೇ ನೃತ್ಯಕ್ಕೆ ಸೇರಿಸಿದ್ದರು. ಕ್ಲಾಸಿಕಲ್, ಫ್ರೀ ಸ್ಟೈಲ್, ವೆಸ್ಟರ್ನ್ ನೃತ್ಯಗಳನ್ನು ಕಲಿತೆವು. ನಾವಿಂದು ಇಲ್ಲಿಗೆ ಬರಲು ಅವರೇ ಸ್ಫೂರ್ತಿ.

◆ **ಧಾರಾವಾಹಿಯೆಡೆಗೆ ಕಾಲಿಟ್ಟಿದ್ದು ಯಾವಾಗ?**

ಮೊದಲ ಬಾರಿ 'ಚಿಕ್ಕಮ್ಮ' ಎಂಬ ಧಾರಾವಾಹಿಯಲ್ಲಿ ಕಾಣಿಸಿಕೊಂಡೆ. ಐದು ವರ್ಷಗಳ ಕಾಲ ಪುಟ್ಟ ಪುಟ್ಟ ಪಾತ್ರಗಳಲ್ಲಿ ತೊಡಗಿಸಿಕೊಂಡಿದ್ದೆ. 'ಚಕ್ರವಾಕ', 'ಗಾಳಿಪಟ', 'ಗೋಕುಲದಲ್ಲಿ ಸೀತೆ' 'ಮೌನ ಮಾತಾದಾಗ' ಹೀಗೆ ಒಂದಷ್ಟು ಧಾರಾವಾಹಿಗಳಲ್ಲಿ ಕಾಣಿಸಿಕೊಂಡೆ. 2ನೇ ಪಿಯುಸಿಯಲ್ಲಿದ್ದಾಗ 'ಪರಿಣಯ' ಎಂಬ ತ್ರಿಕೋನ ಪ್ರೇಮಕಥೆಯ ಧಾರಾವಾಹಿಯಲ್ಲಿ ತೊಡಗಿಕೊಂಡೆ. ಅನಂತರ ವಿದ್ಯಾಭ್ಯಾಸಕ್ಕೆಂದು ಆಳ್ವಾಸ್‌ನತ್ತ ಸಾಗಿದೆ. ಈಗ 'ಲಕ್ಷ್ಮೀ ನಿವಾಸ' ಧಾರಾವಾಹಿಯಲ್ಲಿ ನಟಿಸುತ್ತಿದ್ದೇನೆ.

◆ **ನೃತ್ಯ, ರಂಗಭೂಮಿ, ಕಿರುತೆರೆ ನಿಮ್ಮನ್ನು ಕಲಾವಿದೆಯಾಗಿ ರೂಪಿಸಿದ ಪರಿ ಹೇಗೆ?**

ಆಳ್ವಾಸ್‌ನಲ್ಲಿ ಪದವಿ ಕಲಿತ ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 'ಮಾಸ್ಟರ್ಸ್ ಇನ್ ಪರ್ಫಾರ್ಮಿಂಗ್ ಆರ್ಟ್ಸ್' ಮಾಡಿದೆ. ಭರತನಾಟ್ಯ, ಯಕ್ಷಗಾನ, ಮೋಹಿನಿಯಾಟ್ಟಂ, ಕಥಕ್ ನೃತ್ಯ ಪ್ರಕಾರಗಳನ್ನು ಕಲಿತೆ. ಕಲೆಯಲ್ಲಿಯೇ ಮುಂದುವರೆಯಬೇಕೆಂಬ ಉದ್ದೇಶದೊಂದಿಗೆ ಕಲಾಧಾರಿತ ಶಿಕ್ಷಣವನ್ನೇ ಪಡೆದೆ.

ರಂಗಭೂಮಿ ಮೂಲ ಬೇರಾಯಿತು. ಧಾರಾವಾಹಿ ಆತ್ಮವಿಶ್ವಾಸ ನೀಡಿತು. ಸಿನಿಮಾರಂಗಕ್ಕೆ ಬರಲು ನೃತ್ಯ, ರಂಗಭೂಮಿ, ಕಿರುತೆರೆಗಳು ಪ್ರೇರಣೆ ನೀಡಿದವು.

◆ **ಸಿನಿಮಾರಂಗದ ಅನುಭವ...**

'ರಾಗ ಭೈರವಿ' ಚಿತ್ರದ ಮೂಲಕ ಸಿನಿಮಾರಂಗಕ್ಕೆ ಬಂದೆ. ಹಿಂದೂಸ್ತಾನಿ ಸಂಗೀತ ಆಧರಿಸಿದ ಆ ಸಿನಿಮಾದಲ್ಲಿ ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡೆ. ಸಿನಿಮಾಗೆ ಒಳ್ಳೆಯ ಪ್ರಶಂಸೆಗಳು ಬಂದವು. ಕೋಲ್ಕತ್ತಾ ಸಿನಿಮೋತ್ಸವದಲ್ಲಿ ಪ್ರದರ್ಶನ ಕಂಡಿತು. ನಂತರ 'ಥಗ್ಸ್ ಆಫ್ ರಾಮಘಡ' ಎಂಬ ಕಮರ್ಷಿಯಲ್ ಸಿನಿಮಾ ಮಾಡಿದೆ. ಅದಾದ ಮೇಲೆ 'ಕುಬುಸ' ಸಿನಿಮಾದಲ್ಲಿ ಅಭಿನಯಿಸಿದೆ. ಸಿನಿಮಾ ಬಹಳ ಕಡೆ ಮೆಚ್ಚುಗೆಗೆ ಪಾತ್ರವಾಯಿತು. 'ಸ್ವಪ್ನಮಂಟಪ' ಸಿನಿಮಾದಲ್ಲಿಯೂ ನಟಿಸಿದ್ದೇನೆ. ಇದೀಗ 'ಮಾರಿಗೆ ದಾರಿ', 'ಬ್ಯೂಟಿ' ಎಂಬ ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗಿವೆ. 'ಮಾವುತ' ಸಿನಿಮಾ ಇದೇ ಜನವರಿ 30ಕ್ಕೆ ಬಿಡುಗಡೆಯಾಗುತ್ತಿದೆ. ಒಂದು ತೆಲುಗು, ಎರಡು ತಮಿಳು ಸಿನಿಮಾಗಳಲ್ಲಿಯೂ ತೊಡಗಿದ್ದೇನೆ.

◆ **ಸಿನಿಮಾರಂಗಕ್ಕೆ ಬಂದ ಆರಂಭಿಕ ದಿನಗಳು ಹೇಗಿದ್ದವು?**

ಅವಕಾಶಕ್ಕಾಗಿ ಕಾದಿದ್ದೇವೆ, ಪರದಾಡಿದ್ದೇವೆ. ಏನೂ ಗೊತ್ತಿಲ್ಲದೆ ಈ ಕ್ಷೇತ್ರಕ್ಕೆ ಬಂದಿದ್ದು. ಯಾವುದು ಸರಿ, ಯಾವುದು ತಪ್ಪು ಗೊತ್ತಾಗುತ್ತಿರಲಿಲ್ಲ. ಹೆಣ್ಣುಮಕ್ಕಳು ಸಿನಿಮಾರಂಗಕ್ಕೆ ಬಂದಾಗ ನಡೆಸಿಕೊಳ್ಳುವ ರೀತಿಯೇ ಬೇಸರ ಹುಟ್ಟಿಸುತ್ತಿತ್ತು. ಪ್ರತಿಯೊಂದು ಹೆಜ್ಜೆಯನ್ನೂ ಎಚ್ಚರಿಕೆಯಿಂದ ಇಟ್ಟಿದ್ದೇನೆ.

◆ **ನಿಮಗೆ ಸಿಗುವ ಪಾತ್ರ ಯಾವ ರೀತಿ ಇರಬೇಕೆಂಬುದು ನಿಮ್ಮ ಅಪೇಕ್ಷೆ?**

ನನ್ನನ್ನು ನಾನು ವಿಭಿನ್ನವಾಗಿ ಬಿಂಬಿಸಿಕೊಳ್ಳಬೇಕೆಂಬ ಆಸೆ ಇದೆ. ನನ್ನ ಪಾತ್ರದಿಂದ ಸಿನಿಮಾಗೆ ಒಂದು ದೊಡ್ಡ ಕಾಣಿಕೆಯಿರಬೇಕು. ಡಿಗ್ಲಾಮ್ ಆಗಿಯೂ ಕಾಣಿಸಿಕೊಳ್ಳಬಲ್ಲೆ. ಸಿನಿಮಾಗಳೊಂದಿಗೆ ನಾಟಕಗಳಲ್ಲಿಯೂ ಅಭಿನಯಿಸುತ್ತಿದ್ದೇನೆ. ಈಚೆಗೆ 'ಗೌರವ ರತ್ನ ಕೌರವ' ಎಂಬ ನಾಟಕದಲ್ಲಿ ಭಾನುಮತಿ ಪಾತ್ರಧಾರಿಯಾಗಿದ್ದೆ. ಸಮಯ ಆದಾಗಲೆಲ್ಲಾ ನಾಟಕದಲ್ಲಿಯೂ ತೊಡಗಿಕೊಳ್ಳುತ್ತೇನೆ. ■